ಅಂತಃಪಟದಾಚೆ ವಿಧಿತಂದ ವಧುವನ್ನು ಗಂಡ ಹೆಂಡಿರ ಸಂಬಂಧದೊಡನೆ ಸಖ-ಸಖಿಯರ ಸಂಬಂಧವಾಗಿ ಪರಿವರ್ತಿಸಿಕೊಳ್ಳಲು ಶ್ರಮಿಸಿದ ಸಖೀಗೀತದ ಕವಿಗೆ ವೈವಾಹಿಕ ಸಂಬಂಧದ ಯಶಸ್ಸು ಸಾಧಿತವಾಗಿದೆ ಎಂಬ ವಿಶ್ವಾಸವಿಲ್ಲ. ಏನಾಗಿ ಅದನ್ನು ಸಾಧಿಸಿಕೊಳ್ಳಬಹುದು ಎಂಬುದಕ್ಕೆ ಜೀವನದಲ್ಲಿ ಮಾಗಿದ ಕವಿಯ ಕಲ್ಪನೆಯಲ್ಲಿ (1966) ಮೂಡುವ ಚಿತ್ರ ಕಿನ್ನರಿ-ಕಿನ್ನರರದ್ದು. ಅದು ಆಶಯ. ಸಾಧಿತವಾದ್ದಲ್ಲ. ಕಿನ್ನರಿ ಕೇವಲ ತಂತ್ರೀವಾದ್ಯ ಮಾತ್ರವಲ್ಲದೆ ಕಿನ್ನರ ಜಾತಿಯ ಸ್ತ್ರೀಯೂ ಹೌದು. (ಪೌರಾಣಿಕವಾಗಿ ಕಿನ್ನರರು ದೇವತೆಗಳಲ್ಲಿ ಒಂದು ಜಾತಿ. ಕುಬೇರನ ಪ್ರಜೆಗಳು). 'ಸಖೀ ನಮ್ಮ ಸಖ್ಯದ ಆಖ್ಯಾನ' ಕವನದಲ್ಲಿ ಮನುಷ್ಯ ಸ್ಥಿತಿಯನ್ನು ಮೀರಿ ಅನುಭವಿಸಬೇಕಾದ ಭಾವಸ್ಥಿತಿ ಇದ್ದರೆ, 'ಮಾಯಾಕಿನ್ನರಿ' ಕವನ ಮನುಷ್ಯ ಸ್ಥಿತಿಯಲ್ಲಿ ಅನುಭವಿಸುವ ಐಂದ್ರಿಕ ಸೌಂದರ್ಯದ ಸಾಂಕೇತಿಕ ಅಭಿವ್ಯಕ್ತಿ. ಐಂದ್ರಿಕ ಸೌಂದರ್ಯವು ಇಲ್ಲಿ ಶೃಂಗಾರದ ರಸಾನುಭವವನ್ನು ಭಾವ ಸಾಹಚರ್ಯದಿಂದ ಸ್ಥಾಪಿಸುತ್ತದೆ.

'ಮಾಯಾಕಿನ್ನರಿ'ಯ ಮೊದಲ ಪಲ್ಲವಿ ಹೀಗಿದೆ:

ಮರಳು ಮಾಡಾಕ ಹೋಗಿ ಮರುಳಸಿದ್ಧನ ನಾರಿ
ಮರುಳಾಽಗ್ಯಾಳ ಜಂಗಮಯ್ಯಗ
ಕಿನ್ನರಿ ಆಗ್ಯಾಳ ಕಯ್ಯಾಗ
ನುಡಿದಾಳ ಬಂದಾಂಗ ಮೈಯ್ಯಾಗ ||

ಈ ಹಂತದಲ್ಲಿ ಕವಿ ದ.ರಾ. ಬೇಂದ್ರೆಯವರ ಕವನದ ಮಂದಿನ ಭಾಗವನ್ನು ಪೂರ್ತಿಯಾಗಿ ಓದುವುದು ಕವಿ ಕಾವ್ಯ ಗ್ರಹಿಕೆ ಅಗತ್ಯ :

# ಮಾಯಾಕಿನ್ನರಿ

ಮರುಳು ಮಾಡಾಕ ಹೋಗಿ ಮರುಳಸಿದ್ಧನ ನಾರಿ
ಮರುಳಾಗ್ಯಾಳ ಜಂಗಮಯ್ಯಗ
ಕಿನ್ನರಿ ಆಗ್ಯಾಳ ಕೈಯಾಗ
ನುಡಿದಾಳ ಬಂದ್ಹಾಂಗ ಮೈಯಾಗ ||ಪಲ್ಲವಿ||

1

ಆಡುತಾಡುತ ಬಂದು ಸಿಂಗಾರಸೊಳ್ಳೀ ಹಾಂಗ
ಹಾಡಿಲೆ ಕಿವಿಗಲ್ಲ ಕಡಿದ್ಯೇನ
ಹಾದಿ ತಪ್ಪಿಸಿಕೊಂಡ ಗುಂಗಿಯ ಹುಳದ್ಹಾಂಗ
ಗುಣುಗುಣು ಗೊಣಗುಟ್ಟಿ ನುಡಿದ್ಯೇನ

2

ತನ್ನೊಡೆಯನ ಕೂಡ ಚೆನ್ನಾಟ ನಡಿಸೀದ
ಕುನ್ನಿ ಕುಞಗುಡುವಾಟ ಹಿಡಿದ್ಯೇನ
ಮುಟ್ಟಿದರ ಮುರುಕುವ ವಯ್ಯಾರ ಕಲಿತೆಲ್ಲಿ
ಸುಳ್ಳಿನ ಸಿಡಿಮಿಡಿ ಸಿಡಿದ್ಯೇನ

3

ಎದೆಗೊತ್ತಿ ಹಿಡಿದರು ಮುತ್ತಿಟ್ಟು ಮತ್ತಿಷ್ಟು
ಮುಳುಮುಳು ಸುಮ್ಮನೆ ಅತ್ತೇನ
ಕೈಯಾಡಿಸಿದಂತೆ ಮೈ ಕದ್ದು ನಡುಗುವಿ
ಇದು ಹೊಸ ಗಮಕದ ಗತ್ತೇನ